CAREERINDIA

# B

SL. No. : R

ಒಟ್ಟು ಪ್ರಶ್ನೆಗಳ ಸಂಖ್ಯೆ : 47 ]
Total No. of Questions : 47 ]

**CCE RR**
**UNREVISED**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8
[ Total No. of Printed Pages : 8

**ಸಂಕೇತ ಸಂಖ್ಯೆ : 85-K**

**Code No. : 85-K**

# ವಿಷಯ : ಸಮಾಜ ವಿಜ್ಞಾನ

## Subject : SOCIAL SCIENCE

**(ಕನ್ನಡ ಭಾಷಾಂತರ / Kannada Version)**

**(ಹಳೆ ಪಠ್ಯಕ್ರಮ / Old Syllabus)**

**(ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater)**

ದಿನಾಂಕ : 29. 03. 2019 ] [ Date : 29. 03. 2019

ಸಮಯ : ಬೆಳಗ್ಗೆ 9-30 ರಿಂದ ಮಧ್ಯಾಹ್ನ 12-30 ರವರೆಗೆ ] [ Time : 9-30 A.M. to 12-30 P.M.

ಗರಿಷ್ಠ ಅಂಕಗಳು : 80 ] [ Max. Marks : 80

www.careerindia.com

***ಪರೀಕ್ಷಾರ್ಥಿಗಳಿಗೆ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 47 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

CAREERINDIA



I. **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ :** $10 \times 1 = 10$

1. ಭಾರತದಲ್ಲಿ ಬ್ರಿಟಿಷರು ಹೂಡಿದ ಕೈಗಾರಿಕಾ ಬಂಡವಾಳದಿಂದ

   (A) ಭಾರತೀಯ ಕೈಗಾರಿಕೆಗಳು ಅಭಿವೃದ್ಧಿಗೊಂಡವು

   (B) ಇಂಗ್ಲೆಂಡಿನಲ್ಲಿ ಕೈಗಾರಿಕಾ ಕ್ರಾಂತಿ ಉಂಟಾಯಿತು

   (C) ಭಾರತದ ಸಂಪತ್ತಿನ ಸೋರಿಕೆಗೆ ಕಾರಣವಾಯಿತು

   (D) ಭಾರತದ ನಿರುದ್ಯೋಗಿ ಕುಶಲ ಕರ್ಮಿಗಳಿಗೆ ಉದ್ಯೋಗ ದೊರಕಿತು

2. **A** ಪಟ್ಟಿಯಲ್ಲಿರುವ ನಾಯಕರು ಮತ್ತು **B** ಪಟ್ಟಿಯಲ್ಲಿ ಸ್ವತಂತ್ರ ಭಾರತದಲ್ಲಿ ಅವರು ಹೊಂದಿದ ಹುದ್ದೆಗಳನ್ನು ನೀಡಲಾಗಿದೆ. ಅವುಗಳಿಗೆ ಸರಿಹೊಂದುವ ಉತರದ ಗುಂಪನ್ನು ಗುರುತಿಸಿ :

| ***A* ಪಟ್ಟಿ** | | ***B* ಪಟ್ಟಿ** | |
|---|---|---|---|
| (a) | ಮೌಂಟ್ ಬ್ಯಾಟನ್ | (i) | ಪ್ರಧಾನ ಮಂತ್ರಿ |
| (b) | ಜವಾಹರಲಾಲ್ ನೆಹರೂ | (ii) | ಗೃಹ ಮಂತ್ರಿ |
| (c) | ಡಾ. ಬಾಬು ರಾಜೇಂದ್ರ ಪ್ರಸಾದ್ | (iii) | ಗವರ್ನರ್ ಜನರಲ್ |
| (d) | ಸರ್ದಾರ್ ವಲ್ಲಭಬಾಯಿ ಪಟೇಲ್ | (iv) | ರಾಷ್ಟ್ರಪತಿ |

| | ***a*** | ***b*** | ***c*** | ***d*** |
|---|---|---|---|---|
| (A) | ii | iv | i | iii |
| (B) | iii | i | iv | ii |
| (C) | i | ii | iii | iv |
| (D) | iv | iii | ii | i |

www.careerindia.com

CAREERINDIA



3. ಒಂದು ರಾಷ್ಟ್ರವು ಇನ್ನೊಂದು ರಾಷ್ಟ್ರದ ಸಾರ್ವಭೌಮತ್ವವನ್ನು ಹತ್ತಿಕ್ಕಿ ಅದನ್ನು ತನ್ನ ಸ್ವಾರ್ಥಕ್ಕಾಗಿ ದುರುಪಯೋಗಪಡಿಸಿಕೊಳ್ಳುವುದು ..................... .

(A) ಗುಲಾಮಗಿರಿ (B) ವರ್ಣಭೇದ ನೀತಿ

(C) ಶೀತಲ ಸಮರ (D) ವಸಾಹತುಶಾಹಿತ್ವ

4. 1947 ರಲ್ಲಿ ಭಾರತ ಮತ್ತು ಪಾಕಿಸ್ತಾನ ಯುದ್ಧ ನಡೆದಾಗ ವಿಶ್ವಸಂಸ್ಥೆ ಕದನ ವಿರಾಮವನ್ನು ಘೋಷಿಸಿತು. ಏಕೆಂದರೆ ಅದು

(A) ಯುದ್ಧವನ್ನು ವಿರೋಧಿಸುತ್ತದೆ

(B) ಅಂತರರಾಷ್ಟ್ರೀಯ ಶಾಂತಿಯನ್ನು ಕಾಪಾಡುತ್ತದೆ

(C) ಯುದ್ಧಕ್ಕೆ ಸಿದ್ಧತೆಯನ್ನು ಬಯಸುತ್ತದೆ

(D) ಯುದ್ಧ ಘೋಷಣೆಗೆ ವಿಶ್ವಸಂಸ್ಥೆಯ ಅನುಮತಿ ಬೇಕಾಗುತ್ತದೆ

5. ಕಾಲೇಜಿನ ಎನ್.ಎಸ್.ಎಸ್. ವಿದ್ಯಾರ್ಥಿಗಳು ಶಾಲಾ ಮೈದಾನ ಸ್ವಚ್ಛಗೊಳಿಸುತ್ತಿದ್ದಾರೆ. ಇದು

(A) ಕೂಲಿ ರಹಿತ ದುಡಿಮೆ (B) ಕೂಲಿ ಸಹಿತ ದುಡಿಮೆ

(C) ಸಂಘಟಿತ ದುಡಿಮೆ (D) ಅಸಂಘಟಿತ ದುಡಿಮೆ

6. ಹೆಣ್ಣು ಭ್ರೂಣ ಹತ್ಯೆಯನ್ನು ತಡೆಗಟ್ಟುವ ಉದ್ದೇಶದಿಂದ

(A) ಕುಟುಂಬ ಯೋಜನೆಯನ್ನು ಜಾರಿಗೆ ತರಲಾಗಿದೆ

(B) ಹೆಣ್ಣು ಮಕ್ಕಳಿಗೆ ಮೀಸಲಾತಿ ಕಲ್ಪಿಸಲಾಗಿದೆ

(C) ಸ್ಕ್ಯಾನಿಂಗ್ ಸೆಂಟರ್‌ಗಳು ಭ್ರೂಣದ ಲಿಂಗ ಪತ್ತೆ ಹಚ್ಚುವುದನ್ನು ನಿರ್ಬಂಧಿಸಲಾಗಿದೆ

(D) ಮಕ್ಕಳ ಹಕ್ಕು ಕಾಯಿದೆಯನ್ನು ಜಾರಿಗೆ ತರಲಾಗಿದೆ

7. ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನವನ್ನು ನಿಷೇಧಿಸಲಾಗಿದೆ. ಏಕೆಂದರೆ

(A) ಹೊಗೆಸೊಪ್ಪು ಸೇವನೆ ಆರೋಗ್ಯಕ್ಕೆ ಹಾನಿಕಾರಕ

(B) ಸಾರ್ವಜನಿಕ ಸ್ಥಳಗಳ ಶುಚಿತ್ವ ಕಾಪಾಡಲು

(C) ಹೊಗೆಸೊಪ್ಪಿನ ಉತ್ಪಾದನೆಗೆ ಲೈಸನ್ಸ್ ಬೇಕಾಗಿರುವುದರಿಂದ

(D) ಹೊಗೆಸೊಪ್ಪನ್ನು ಕಾನೂನಾತ್ಮಕವಾಗಿ ನಿಷೇಧಿಸಲಾಗಿದೆ

www.careerindia.com

CAREERINDIA



8. ಈ ನಕ್ಷೆಯಲ್ಲಿ ಗುರುತಿಸಿರುವ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳಿಗೆ ಕ್ರಮವಾಗಿ ಹೋಲಿಕೆಯಾಗುವುದು :




(A) 1 — ಅಮೃತಸರ, 2 — ಹೈದರಾಬಾದ್, 3 — ಮುಂಬೈ, 4 — ಗೌಹಾಟಿ

(B) 1 — ಮುಂಬೈ, 2 — ಗೌಹಾಟಿ, 3 — ಅಮೃತಸರ, 4 — ಹೈದರಾಬಾದ್

(C) 1 — ಹೈದರಾಬಾದ್, 2 — ಮುಂಬೈ, 3 — ಗೌಹಾಟಿ, 4 — ಅಮೃತಸರ

(D) 1 — ಗೌಹಾಟಿ, 2 — ಅಮೃತಸರ, 3 — ಹೈದರಾಬಾದ್, 4 — ಮುಂಬೈ

9. 'ಬ್ಯಾಂಕುಗಳ ಬ್ಯಾಂಕು' ಎಂದು ಕರೆಯಲ್ಪಡುವುದು

(A) ಕೈಗಾರಿಕಾ ಅಭಿವೃದ್ಧಿ ಬ್ಯಾಂಕು

(B) ಭೂ ಅಭಿವೃದ್ಧಿ ಬ್ಯಾಂಕು

(C) ಎಕ್ಸಿಂ ಬ್ಯಾಂಕು

(D) ಭಾರತೀಯ ರಿಸರ್ವ್ ಬ್ಯಾಂಕ್

10. ಇವರು ಭಾರತ ಸರ್ಕಾರದ 'ತೆರೆದ ಅಂತರಿಕ್ಷ ನೀತಿ'ಯನ್ನು ಸದುಪಯೋಗಪಡಿಸಿಕೊಂಡ ಉದ್ಯಮಿ

(A) ಡಾ. ಪ್ರತಾಪ ರೆಡ್ಡಿ

(B) ನರೇಶ್ ಗೋಯಲ್

(C) ನಾರಾಯಣಮೂರ್ತಿ

(D) ಧೀರುಭಾಯಿ ಅಂಬಾನಿ

www.careerindia.com

CAREERINDIA



II. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** 14 × 1 = 14

11. ಕಾಲಚಕ್ರ ಎಂದರೇನು ?

12. ಸಂವಿಧಾನದ 42ನಯ ತಿದ್ದುಪಡಿಯ ಮೂಲಕ 'ಜಾತ್ಯಾತೀತ' ಎಂಬ ಪದ ಸೇರಿಸಲಾಯಿತು. ಏಕೆ ?

13. ಶೀತಲ ಸಮರದ ನಂತರದ ಪರಿಣಾಮವೇನು ?

14. ಅನಕ್ಷರತೆಯನ್ನು ಹೋಗಲಾಡಿಸುವಲ್ಲಿ ಶಿಕ್ಷಣ ಹಕ್ಕು ಕಾಯ್ದೆಯ ಮಹತ್ವವೇನು ?

15. ಸಾರ್ಕ್‌ನ ಪ್ರಗತಿಗೆ ತೊಡಕಾಗಿರುವ ಅಂಶ ಯಾವುದು ?

16. 'ಕೂಲಿಯಿಂದ ಶಾಲೆಗೆ' ಕಾರ್ಯಕ್ರಮದ ಮುಖ್ಯ ಉದ್ದೇಶವೇನು ?

17. ಭಾರತದಲ್ಲಿಯೇ ಅತೀ ಹೆಚ್ಚು ಮಳೆ ಆಗುವ ಸ್ಥಳ ಯಾವುದು ?

18. ಸುವರ್ಣ ಕ್ರಾಂತಿ ಎಂದರೇನು ?

19. ಕೋಸಿ ಯೋಜನೆಯಿಂದ ನೇಪಾಳಕ್ಕೆ ಹೇಗೆ ಅನುಕೂಲವಾಗಿದೆ ?

20. ಪೆಟ್ರೋಲಿಯಂನ್ನು 'ದ್ರವರೂಪದ ಚಿನ್ನ' ಎಂದು ಏಕೆ ಕರೆಯುವರು ?

21. ಅರ್ಥವ್ಯವಸ್ಥೆಯಲ್ಲಿ ರಚನಾತ್ಮಕ ಬದಲಾವಣೆ ಎಂದರೇನು ?

22. ತಲಾ ಆದಾಯವನ್ನು ಹೇಗೆ ಕಂಡುಹಿಡಿಯುವಿರಿ ?

23. ಕೊರತೆಯ ಆಯ–ವ್ಯಯ ಎಂದರೇನು ?

24. ಜಿಲ್ಲಾ ಕೈಗಾರಿಕಾ ಕೇಂದ್ರಗಳನ್ನು ಯಾವಾಗ ಸ್ಥಾಪಿಸಲಾಯಿತು ?

III. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ :** 15 × 2 = 30

25. ರಾಬರ್ಟ್ ಕ್ಲೈವ್‌ನ 'ದ್ವಿಸರ್ಕಾರ' ಪದ್ಧತಿಯನ್ನು ವಿವರಿಸಿ.

26. ಮೂರನೇ ಆಂಗ್ಲೋ–ಮೈಸೂರು ಯುದ್ಧವು ಬ್ರಿಟಿಷರಿಗೆ ವರದಾನವಾಯಿತು. ಹೇಗೆ ?

27. ಸತ್ಯಶೋಧಕ ಸಮಾಜವು ಪ್ರತಿಪಾದಿಸಿದ ಸುಧಾರಣೆಗಳನ್ನು ವಿವರಿಸಿ.

**ಅಥವಾ**

ಅನಿಬೆಸೆಂಟರು ಭಾರತೀಯ ತಾತ್ವಿಕತೆಗೆ ಮತ್ತು ಸ್ವಾತಂತ್ರ್ಯ ಚಳುವಳಿಗೆ ನೀಡಿರುವ ಕೊಡುಗೆಗಳೇನು ?



www.careerindia.com

CAREERINDIA



28. ಮುಸೋಲಿನಿ ಹೇಗೆ ಸರ್ವಾಧಿಕಾರಿಯಾದನು ?

29. ಕೋಮುವಾದವು ಹೇಗೆ ನಮ್ಮ ಸಮಾಜದ ಪ್ರಮುಖ ಸಮಸ್ಯೆಯಾಗಿದೆ ?

30. ಭಯೋತ್ಪಾದಕತೆಯಿಂದ ಉಂಟಾಗುವ ಪರಿಣಾಮಗಳಾವುವು ?

31. ಪರಿಸರ ಸಂರಕ್ಷಣೆಯ ಉದ್ದೇಶಕ್ಕಾಗಿ ನಡೆದ ಯಾವುದಾದರೂ ನಾಲ್ಕು ಚಳುವಳಿಗಳನ್ನು ಹೆಸರಿಸಿ.

32. ಶಿವಾಲಿಕ್ ಶ್ರೇಣಿಯನ್ನು ಕುರಿತು ಟಿಪ್ಪಣಿ ಬರೆಯಿರಿ.

33. ಕಪ್ಪು ಮಣ್ಣು ಮತ್ತು ಮರುಭೂಮಿ ಮಣ್ಣುಗಳಿಗಿರುವ ವ್ಯತ್ಯಾಸವೇನು ?

34. ಭಾರತದಲ್ಲಿ ಅರಣ್ಯ ಸಂರಕ್ಷಣೆಯ ಪ್ರಾಮುಖ್ಯತೆಯನ್ನು ತಿಳಿಸಿ.

35. ಭೌಗೋಳಿಕ ಮಾಹಿತಿ ವ್ಯವಸ್ಥೆಯ ( GIS ) ಪ್ರಾಮುಖ್ಯತೆ ಏನು ?

36. ಕಡಲ ಕೊರೆತವನ್ನು ಹೇಗೆ ತಡೆಗಟ್ಟಬಹುದು ?

37. ಗ್ರಾಮೀಣ ಜನರು ನಗರಗಳಿಗೆ ವಲಸೆ ಹೋಗುವುದನ್ನು ತಡೆಗಟ್ಟಲು ಕೈಗೊಳ್ಳಬಹುದಾದ ಕ್ರಮಗಳು ಯಾವುವು ?

38. ಪಂಚವಾರ್ಷಿಕ ಯೋಜನೆಗಳ ಉದ್ದೇಶಗಳೇನು ?

39. 'ಜಾಗತೀಕರಣವು ಆರೋಗ್ಯದ ಮೇಲೆ ನಕಾರಾತ್ಮಕ ಪರಿಣಾಮ ಬೀರಿದೆ'. ಹೇಗೆ ?

IV. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಉತ್ತರಿಸಿ :** $6 \times 3 = 18$

40. 'ಇಂಗ್ಲೆಂಡಿನಲ್ಲಾದ ಕೈಗಾರಿಕಾ ಕ್ರಾಂತಿಯು 1857 ರ ದಂಗೆಗೆ ಕಾರಣವಾಯಿತು.' ಸ್ಪಷ್ಟೀಕರಿಸಿ.

***ಅಥವಾ***

'ಬ್ರಿಟಿಷರು ಜಾರಿಗೆ ತಂದ ಶಿಕ್ಷಣ ಬೆಳವಣಿಗೆಯು ಭಾರತದ ಸ್ವಾತಂತ್ರ್ಯ ಚಳುವಳಿಗೆ ಪ್ರೇರಣೆಯಾಯಿತು'. ಸ್ಪಷ್ಟೀಕರಿಸಿ.

41. 'ಭಾರತವು ಶಾಂತಿಪ್ರಿಯ ರಾಷ್ಟ್ರವಾಗಿದ್ದರೂ ಸಂಪೂರ್ಣ ನಿಶ್ಶಸ್ತ್ರೀಕರಣವನ್ನು ಪ್ರೋತ್ಸಾಹಿಸುತ್ತಿಲ್ಲ'. ಏಕೆ ?

***ಅಥವಾ***

ಭಾರತ ರಷ್ಯಾದೊಂದಿಗೆ ಉತ್ತಮ ಬಾಂಧವ್ಯ ಹೊಂದಿದೆ. ಹೇಗೆ ?

42. ಅಸ್ಪೃಶ್ಯತಾ ನಿವಾರಣೆಯ ಸಂವಿಧಾನಾತ್ಮಕ ಮತ್ತು ಕಾನೂನಾತ್ಮಕ ಕ್ರಮಗಳನ್ನು ವಿವರಿಸಿ.

***ಅಥವಾ***

ಸಂಘಟಿತ ಕಾರ್ಮಿಕರಿಗೆ ದೊರೆಯುವ ಸೌಲಭ್ಯಗಳನ್ನು ವಿವರಿಸಿ.



www.careerindia.com

CAREERINDIA



43. 'ಜೈವಿಕ ತಂತ್ರಜ್ಞಾನದ ಅಭಿವೃದ್ಧಿಯಿಂದ ವ್ಯವಸಾಯ ಕ್ರಾಂತಿ ಉಂಟಾಗಿದೆ'. ವಿವರಿಸಿ.

***ಅಥವಾ***

'ರಸ್ತೆಗಳ ಅಭಿವೃದ್ಧಿ ಕೃಷಿ ಕ್ಷೇತ್ರವನ್ನು ಪ್ರೋತ್ಸಾಹಿಸುತ್ತದೆ'. ವಿವರಿಸಿ.

44. ಗ್ರಾಮೀಣ ಮಹಿಳೆಯರ ಸಬಲೀಕರಣದಲ್ಲಿ ಮಹಿಳಾ ಸ್ವಸಹಾಯ ಸಂಘಗಳ ಪಾತ್ರವನ್ನು ವಿವರಿಸಿ.

***ಅಥವಾ***

ಕೇಂದ್ರ ಸರ್ಕಾರವು ಸಂಗ್ರಹಿಸುವ ಪ್ರಮುಖ ತೆರಿಗೆಯೇತರ ಆದಾಯಗಳನ್ನು ತಿಳಿಸಿ.

45. ಉಳಿತಾಯ ಖಾತೆ ಮತ್ತು ಚಾಲ್ತಿ ಖಾತೆಗಳಿಗಿರುವ ವ್ಯತ್ಯಾಸಗಳೇನು ?

***ಅಥವಾ***

ಜೀವ ವಿಮೆ ಮತ್ತು ಸಾಮಾನ್ಯ ವಿಮೆಗಳಿಗಿರುವ ವ್ಯತ್ಯಾಸಗಳೇನು ?

V. **ಈ ಕೆಳಗಿನ ಪ್ರಶ್ನೆಗೆ *ಎಂಟರಿಂದ ಹತ್ತು* ವಾಕ್ಯಗಳಲ್ಲಿ ಉತ್ತರಿಸಿ :** 4

46. ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಅಸಹಕಾರ ಚಳುವಳಿಯನ್ನು ವಿವರಿಸಿ.

VI. 47. **ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ :** 1 + 3 = 4

a) $82\frac{1}{2}^{o}$ ಪೂರ್ವ ರೇಖಾಂಶ

b) ಕೈಗಾ

c) ಭಾಕ್ರಾ ನಂಗಲ್

***ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ : (ಪ್ರಶ್ನೆ ಸಂಖ್ಯೆ 47 ರ ಬದಲಿಗೆ)***

ಭಾರತೀಯರ ಜನಜೀವನಕ್ಕೆ ಹಿಮಾಲಯ ಪರ್ವತದಿಂದಾಗುವ ಅನುಕೂಲಗಳೇನು ? 4

www.careerindia.com

CAREERINDIA



www.careerindia.com